ಓಎಸ್ 206/2022

ಪಿಡಬ್ಲ್ಯೂ-3

**ಸಾಕ್ಷಿಯು ದಿಃ 28.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 3ನೇ ಪ್ರತಿವಾದಿ ಪರ ವಕೀಲರಿಂದ**

ವಾದಿಗಳು ಬೇಸಾಯ ಮಾಡುತ್ತಿರುವ ಜಮೀನಿನ ಸರ್ವೇ ನಂಬರ್ 86/1ಎ ಆಗಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸರ್ವೇ ನಂಬರ್ 86/1ಎ ಬರೆಸಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 86 ರಲ್ಲಿ ಎಷ್ಟು ಪೋಡ್ ಗಳು ಇವೆ ಎಂದು ನನಗೆ ಗೊತ್ತಿಲ್ಲ. ದಾವ ಆಸ್ತಿಯಿಂದ ½ ಕಿ.ಮೀ ದೂರದಲ್ಲಿ ನನಗೆ ಸೇರಿದ ಸರ್ವೇ ನಂಬರ್ 209 ಜಮೀನು ಇರುತ್ತದೆ. ಸರ್ವೇ ನಂಬರ್ 209 ನನಗೆ ಸೇರಿದ್ದು ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ. ವಾದಿಗಳು ವ್ಯವಸಾಯ ಮಾಡುತ್ತಿರುವ ಜಮೀನಿನಲ್ಲಿ ಕೊಳವೆ ಬಾವಿ ಮತ್ತು ಪಂಪ್ ಹೌಸ್ ಮಾತ್ರ ಇರುತ್ತದೆ, ಬೇರೆ ಯಾವುದೇ ಕಟ್ಟಡ ಇರುವುದಿಲ್ಲವಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಗೋಪಾಲಶೆಟ್ಟಿ ಮತ್ತು ಚಿಕ್ಕಶೆಟ್ಟಿ ರವರು ಸ್ವಾಧೀನದಲ್ಲಿರುವ ಜಮೀನು ಗೊತ್ತು, ಅದರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಗೋಪಾಲಶೆಟ್ಟಿ ಮತ್ತು ಚಿಕ್ಕಶೆಟ್ಟಿ ರವರ ಜಮೀನು ವಾದಿಗಳ ಜಮೀನಿನ ಪಶ್ಚಿಮಕ್ಕೆ ಇರುತ್ತದೆ. ದಾವ ಆಸ್ತಿಯ ಪೂರ್ವಕ್ಕೆ ಮರಿಶೆಟ್ಟಿ ರವರ ಜಮೀನು ಇದೆ ಅದು ಮೊದಲು ವೆಂಡರ್ ಕೃಷ್ಣಪ್ಪ ರವರಿಗೆ ಸೇರಿದ್ದಾಗಿತ್ತು. ದಾವ ಆಸ್ತಿಯ ಪೂರ್ವಕ್ಕಿರುವ ಆಸ್ತಿಯ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ವಾದಿಗಳು ಬೇಸಾಯ ಮಾಡುತ್ತಿರುವ ಸರ್ವೇ ನಂಬರ್ ನನಗೆ ಗೊತ್ತಿಲ್ಲದಿದ್ದರೂ ಸಹ ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ